# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬ಸಿ<br>Part – VIC | ಕಲಬುರಗಿ, ಗುರುವಾರ, ೦೭, ಮೇ, ೨೦೨೬ (ವೈಶಾಖ, ೧೭, ಶಕವರ್ಷ, ೧೯೪೮)<br>KALBURGI THURSDAY, 07, MAY, 2026 ( VAISHAKHA , 17, SHAKAVARSHA, 1948) | ನಂ. ೦೩<br>No. 03 |
|---|---|---|

**ಕರ್ನಾಟಕ ಸರ್ಕಾರ**

**ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ**

ಜಿಲ್ಲಾಡಳಿತ ಭವನ, ಚಿತ್ತಾಪುರ ರೋಡ ಯಾದಗಿರಿ

---

**ಸಂ:ಕಂ:ಚುನಾವಣೆ:27:2025–26** **ದಿನಾಂಕ:06.05.2026**

**–:: ಅಧಿಸೂಚನೆ ::–**

ಮಾನ್ಯ ಪೀಠಾಧಿಕಾರಿ (ಗ್ರಾ.ಪಂ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: ಆರ್‌ಡಿಪಿಆರ್ 479 ಜಿಪಿಎ 2026 ದಿನಾಂಕ:04.05.2026 ರನ್ವಯ ಶಹಾಪುರ ತಾಲೂಕಿನ ಕ್ಷೇತ್ರ ವ್ಯಾಪ್ತಿಯ ದೋರನಹಳ್ಳಿ ಗ್ರಾಮಪಂಚಾಯಿತಿಯ ದೋರನಹಳ್ಳಿ ಗ್ರಾಮ ಮತ್ತು ದೋರನಹಳ್ಳಿ ತಾಂಡಾ ವ್ಯಾಪ್ತಿಯ ಪ್ರದೇಶಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜಗೆರಿಸಿ, ಬೇವಿನಹಳ್ಳಿ(ಜೆ) ಗ್ರಾಮವನ್ನು ಕೈಬಿಟ್ಟಿರುವ ಹಿನ್ನಲೆಯಲ್ಲಿ ಬೇವಿನಹಳ್ಳಿ (ಜೆ) ಗ್ರಾಮವನ್ನು ಕನ್ಯಾಕೋಳ್ಳುರು ಗ್ರಾಮ ಪಂಚಾಯತಿಗೆ ಸೇರ್ಪಡೆಗೊಳಿಸಿ ಪುನರ್ ರಚಿಸಲು ಕರ್ನಾಟಕ ಗ್ರಾಮ ಸ್ವರಾಜ್ಯ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4 ರನ್ವಯ ಸರ್ಕಾರ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿ ನಿರ್ದೇಶಿಸಿದ್ದು ಇರುತ್ತದೆ.

ಈ ಕೆಳಗೆ ತಿಳಿಸಿರುವಂತೆ ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 4 ರಡಿ ಅಧಿಸೂಚನೆ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು /ಸಲಹೆಗಳನ್ನು ಸಲ್ಲಿಸಲು ಇಚ್ಚಿಸುವ ಎಲ್ಲಾ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ **ಏಳು ದಿನಗಳೊಳಗಾಗಿ** ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಭವನ, ಚಿತ್ತಾಪೂರ ರಸ್ತೆ, ಯಾದಗಿರಿ ಇವರಿಗೆ ಸಲ್ಲಿಸಬೇಕೆಂದು ಹಾಗೂ ಅಧಿಸೂಚನೆಯನ್ನು ಸದರಿ ಅವಧಿಯ ತರುವಾಯ ನಿಗಧಿತ ಸಮಯದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳುವುದೆಂದು ಈ ಮೂಲಕ ತಿಳಿಸಿದೆ.

]

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಕೋಷ್ಟಕ

**ತಾಲ್ಲೂಕಿನ ಹೆಸರು: ಶಹಾಪುರ**

| ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯತಿಯ ಹೆಸರು ಮತ್ತು ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|
| 1 | 2 | 3 |
| ಶಹಾಪರ | **ಕನ್ಯಾಕೋಳ್ಳುರ** | ಕನ್ಯಾಕೊಳುರ<br>ತಿಪ್ಪನಹಳ್ಳಿ<br>ಬೆನಕನಹಳ್ಳಿ (ಜೆ)<br>ನಂದಿಹಳ್ಳಿ (ಕೆ) (ಡಿ)<br>ಹಳಿಸಗರ (ಪುರಸಭೆ ವ್ಯಾಪ್ತಿ ಹೊರತು ಪಡಿಸಿ)<br>ಬೇವಿನಹಳ್ಳಿ(ಜೆ) |

**(ಶ್ರೀ ಹರ್ಷಲ್ ಭೋಯರ್)**
**ಜಿಲ್ಲಾಧಿಕಾರಿಗಳು**
**ಯಾದಗಿರಿ ಜಿಲ್ಲೆ, ಯಾದಗಿರಿ**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಕಲಬುರಗಿ.

MADESHWARA NARASIMHA
MURTHY JAYASIMHA